

# ರಾಜ್ ಜೊತೆ ಬಂದ ರಾಯರ ಸೊಸೆ

**ಸಿನಿಮಾ ಕಲಾವಿದರು ಜನರಿಂದ ಹಾಗೂ ಸಮಾಜದ ಮುಖ್ಯವಾಹಿನಿಯಿಂದ ಅಂತರ ಕಾಪಾಡಿಕೊಳ್ಳುವುದು ಇಂದಿನ ವಿದ್ಯಮಾನ. ಆದರೆ, ಕನ್ನಡ ಸಿನಿಮಾ ಇತಿಹಾಸದ ಪುಟಗಳನ್ನು ತೆರೆದುನೋಡಿದರೆ, ಸಿನಿಮಾ ಕಲಾವಿದರು ನಾಟಕಗಳಲ್ಲಿ ಬಣ್ಣ ಹಚ್ಚಿದ ಹಾಗೂ ಜನರ ಸಂಕಷ್ಟಗಳಿಗೆ ಬೀದಿಗಿಳಿದು ಸ್ಪಂದಿಸಿದ ಉದಾಹರಣೆಗಳು ಹಲವು ದೊರೆಯುತ್ತವೆ. ಅಂಥ ಕೆಲವು ನೆನಪುಗಳ ಈ ಕಿರು ಬರಹ, 'ಕನ್ನಡ ಸಿನಿಮಾ ಸಂಸ್ಕೃತಿ'ಯ ವಿಶಿಷ್ಟ ನೆನಪೊಂದರ ದಾಖಲಾತಿಯೂ ಹೌದು.**

■ ಪದ್ಮಾ ಶ್ರೀರಾಮ

ಕೆಲವು ದಶಕಗಳ ಹಿಂದಿನ ಡಿಸೆಂಬರ್ ತಿಂಗಳಿನಲ್ಲಿ ನಮ್ಮೂರು ಹಾಸನದಲ್ಲಿ ದನಗಳ ಜಾತ್ರೆಯ ಸಂಭ್ರಮ. ಊರಿನ ಪ್ರತಿಯೊಬ್ಬರಿಗೂ ಜಾತ್ರೆಯ ಕೋಲಾಹಲದಲ್ಲಿ ಪ್ರಮುಖ ಆಕರ್ಷಣೆ ಎಂದರೆ ಜಾತ್ರೆ ಮೈದಾನದಲ್ಲಿ ಟೆಂಟ್ ಹಾಕಿರುತ್ತಿದ್ದ ಅಂದಿನ ಪ್ರತಿಷ್ಠಿತ ನಾಟಕದ ಕಂಪನಿಗಳು.

1950ರ ದಶಕದ ಕೊನೆಯಲ್ಲಿ ಕರ್ನಾಟಕದ ಸುಪ್ರಸಿದ್ಧ ಕನ್ನಡ ಸಿನಿಮಾ ನಟರು 'ಕನ್ನಡ ಚಲನಚಿತ್ರ ಕಲಾವಿದರ ಸಂಘ' ಎಂಬ ಸಂಘವನ್ನು ಸ್ಥಾಪಿಸಿಕೊಂಡ ಮೇಲೆ ನಾಟಕ ಆಡಲು ನಮ್ಮೂರ ಜಾತ್ರೆಗೆ ಬಂದರು. 'ಬೇಡರ ಕಣ್ಣಪ್ಪ', 'ಸಾಹುಕಾರ', 'ಎಚ್ಚಮ ನಾಯಕ' ನಾಟಕಗಳನ್ನು ಅಭಿನಯಿಸಿದರು. ಸಹಜವಾಗಿ ರಾಜ್‌ಕುಮಾರ್ ಅವರದು ಮುಖ್ಯ ಪಾತ್ರ. ಉಳಿದಂತೆ ಬಾಲಕೃಷ್ಣ, ನರಸಿಂಹರಾಜು, ಜಿ.ವಿ. ಅಯ್ಯರ್ ಇತರ ಪಾತ್ರಗಳನ್ನು ಅಭಿನಯಿಸುತ್ತಿದ್ದರು.

ಅಂದಿನ ದಿನಗಳಲ್ಲಿ ಬಹುಪಾಲು ನಟನಟಿಯರು ರಂಗಭೂಮಿಯಿಂದ ಬಂದವರಾದ್ದರಿಂದ ಭಾವ ಪ್ರದರ್ಶನ. ಸಂಭಾಷಣೆ ಹೇಳುವ ಕಲೆಯಲ್ಲಿ

